ಅಪರ ಸರಕಾರಿ ಅಭಿಯೋಜಕರ ಕಚೇರಿ
ಜಿಲ್ಲಾ ನ್ಯಾಯಾಲಯ ಆವರಣ
ಕಲಬುರಗಿ-585 102

ಸಂಖ್ಯೆ:ಪಿಪಿ1/ಕಲಬುರಗಿ/ಪ.ಪ್ರ/ /2021-22
ಎಸ್.ಸಿ.ನಂ:117/2019

1ನೇ ಸರಕಾರಿ ಅಭಿಯೋಜಕರ ಕಛೇರಿ
ಕಲಬುರಗಿ
ದಿನಾಂಕ:-18/08/2021

## ಪತ್ರಿಕಾ ಪ್ರಕಟಣೆ

## ಕೊಲೆ ಪ್ರಯತ್ನ ಮಾಡಿದ ಆರೋಪಿತಳಿಗೆ 05 ವರ್ಷ ಶಿಕ್ಷೆ ಮತ್ತು ದಂಡ ವಿಧಿಸಿರುವ ಕುರಿತು.

**ಪ್ರಕರಣದ ಸಂಕ್ಷಿಪ್ತ ಸಾರಾಂಶ:-**

ಸ್ಟೇಷನ ಬಜಾರ ಪೋಲಿಸ್ ಠಾಣಾ ವ್ಯಾಪ್ತಿಯಲ್ಲಿ ಬರುವ ಆನಂದ ನಗರ ಬಡಾವಣೆಯಲ್ಲಿ ವಾಸವಾಗಿರುವ ಫಿರ್ಯಾದಿ ಜಗದೀಶ ತಂದೆ ಶರಣಗೌಡ ಪಾಟೀಲ್ ಇವರ ಮಗಳಾದ ಅಥನಾ (3ವರ್ಷ) ಮತ್ತು ವಿರೇಂದ್ರ ತಂದೆ ವಿಶ್ವನಾಥ ಪಾಟೀಲ ಇವರ ಮಗಳಾದ ಪಾರ್ವತಿ (10) ಇವರು ದಿನಾಂಕ:25-03-2019 ರಂದು ಬೆಳಿಗ್ಗೆ 11:15 ಗಂಟೆಯ ಸುಮಾರಿಗೆ ಫಿರ್ಯಾದಿದಾರರ ಮನೆಯ ಮುಂದೆ ಆಟ ಆಡುತ್ತಿರುವಾಗ ಫಿರ್ಯಾದಿ ಮತ್ತು ಅವರ ಮನೆಯವರು ಚೆನ್ನಾಗಿರುವುದು ಸಹಿಸದೆ, ಆಗಾಗ ಅವರೊಂದಿಗೆ ತಕರಾರು ಮಾಡುತ್ತಾ ಬಂದಿರುವ ಪ್ರಕರಣಾ ಆರೋಪಿ ಶ್ರೀದೇವಿ ಗಂಡ ಸಂಪತರಾವ್ ಕೋರವಾರ ಇವಳು ಆಟವಾಡುತ್ತಿರುವ ಮಕ್ಕಳಿಗೆ ಚಾಕಲೇಟ್ ಕೊಡುತ್ತೇನೆ ಬಾ ಅಂತಾ ಕರೆದು ಮಕ್ಕಳ ಕಣ್ಣು ಮುಚ್ಚಿಸಿ ಕಾಯಿಸಿದ ಅಡುಗೆ ಎಣ್ಣೆಯನ್ನು ಅವರಿಬ್ಬರ ಮೈಮೇಲೆ ಹಾಕಿದ್ದರಿಂದ ಅಥನಾಳ ಗದಗೆ, ತಲೆಗೆ, ಎರಡು ಕಾಲುಗಳಿಗೆ ಕೈಗಳಿಗೆ ಭುಜಕ್ಕೆ ಸುಟ್ಟ ಗಾಯಗಳಾಗಿದ್ದು, ಮತ್ತು ಪಾರ್ವತಿಗೆ ಮುಖಕ್ಕೆ, ಎರಡು ಕೈಗಳಿಗೆ, ಬೆರಳುಗಳಿಗೆ, ಎರಡು ಕಾಲುಗಳಿಗೆ, ತೊಡೆಗಳಿಗೆ ಗಂಭೀರ ಸ್ವರೂಪದ ಸುಟ್ಟಗಾಯಗಳಾಗಿದ್ದು, ಆರೋಪಿ ಶ್ರೀದೇವಿ ಇವಳು ಪಕ್ಕದ ಮನೆಯವರಾದ ಫಿರ್ಯಾದಿ ಮತ್ತು ಅವರ ಕುಟುಂಬದವರು ಚೆನ್ನಾಗಿರುವುದನ್ನು ಸಹಿಸದೆ ಮತ್ತು ಅವರೊಂದಿಗೆ ತಕರಾರು ಮಾಡಿಕೊಂಡಿದ್ದನ್ನು ಮನಸ್ಸಿನಲ್ಲಿಟ್ಟುಕೊಂಡು ಮಕ್ಕಳನ್ನು ಕೊಲೆ ಮಾಡಲು ಪ್ರಯತ್ನಿಸಿರುತ್ತಾಳೆ ಎಂದು ಆರೋಪಿಸಿ ನೀಡಿದ ದೂರಿನನ್ವಯ, ಸ್ಟೇಷನ ಬಜಾರ ಪೊಲೀಸ ಠಾಣೆಯಲ್ಲಿ ದೂರು ದಾಖಲಾಗಿದ್ದು, ನಂತರ ತನಿಖೆ ಪೂರ್ಣಗೊಳಿಸಿ, ಆಗಿನ ತನಿಖಾಧಿಕಾರಿಗಳಾದ, ಶ್ರೀ ಎ. ರಾಮಚಂದ್ರ, ಪಿ.ಎಸ್.ಐ ಸ್ಟೇಷನ ಬಜಾರ ಠಾಣೆ ರವರು ಆರೋಪಿತಳ ವಿರುದ್ಧ ಕಲಂ:-326, 307 ಭಾರತೀಯ ದಂಡ ಸಂಹಿತೆ (ಐಪಿಸಿ) ಅಡಿಯಲ್ಲಿ ದೋಷಾರೋಪಣೆ ಪಟ್ಟಿಯನ್ನು ಸಲ್ಲಿಸಿರುತ್ತಾರೆ.

ನಂತರ ಪ್ರಕರಣದ ವಿಚಾರಣೆಯನ್ನು ಮಾನ್ಯ 1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ಕಲಬುರಗಿ, ಇವರ ಮುಂದೆ ವಿಚಾರಣೆಗಾಗಿ ಬಂದಿದ್ದು, **ಮಾನ್ಯ ಶ್ರೀ. ಶುಕ್ಲಾಕ್ಷ ಪಾಲನ್, 1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,** ಪ್ರಕರಣದ ವಿಚಾರಣೆಯನ್ನು ನಡೆಸಿ, ನಂತರ ಸಾಕ್ಷ್ಯಾಧಾರಗಳನ್ನು ಪರಾಮರ್ಷಿಸಿ ಆರೋಪಿ ಶ್ರೀದೇವಿ ಗಂಡ ಸಂಪತರಾವ್ **ಕೋರವಾರ ಇವಳು** ಕಲಂ:-326 ಭಾರತೀಯ ದಂಡ ಸಂಹಿತೆಯ ಅಡಿಯಲ್ಲಿ ಬರುವ ಆರೋಪ ರುಜುವಾತಾಗಿ ತಪ್ಪಿತಸ್ಥಳೆಂದು ನಿರ್ಣಯಿಸಿ, ಸದರಿ ಅಪರಾಧಕ್ಕಾಗಿ ಆರೋಪಿತಳಿಗೆ **05 ವರ್ಷ ಸಾಧಾರಣ ಶಿಕ್ಷೆ ಮತ್ತು ರೂ.2,00,000/- ದಂಡವನ್ನು** ವಿಧಿಸಿರುತ್ತಾರೆ. ದಂಡವನ್ನು ಭರಿಸದಿದ್ದಲ್ಲಿ ಹೆಚ್ಚುವರಿಯಾಗಿ 01 ವರ್ಷಗಳ ಸಾದಾ ಕಾರಾಗೃಹ ವಾಸದ ಶಿಕ್ಷೆ ವಿಧಿಸಿರುತ್ತಾರೆ. ದಂಡದ ವಿಧಿಸಿದ ಹಣದಲ್ಲಿ ರೂ.1,50,000/-ವನ್ನು ನೊಂದ ಬಾಲಕಿಯರಿಗೆ ಸಮನಾಗಿ ನಷ್ಟ ಭರ್ತಿಗಾಗಿ ಕೊಡಲು ಮತ್ತು ಸದರಿ ಹಣ ಅವರು ವಯಸ್ಕರಾಗುವವರೆಗೆ ಬ್ಯಾಂಕಿನಲ್ಲಿ ಠೇವಣಿ ಇಡಲು ಆದೇಶಿಸಿ, ಮಾನ್ಯ ನ್ಯಾಯಾಲಯ ತೀರ್ಪು ನೀಡಿದ್ದು ಇರುತ್ತದೆ.

ಮುಂದುವರಿದು, ನೊಂದ ಬಾಲಕಿಯ ಪಾಲಕರು ಈಗಾಗಲೇ ಚಿಕಿತ್ಸೆಗಾಗಿ 18-20 ಲಕ್ಷ ರೂಪಾಯಿಗಳನ್ನು ಖರ್ಚುಮಾಡಿದ್ದು, ಸದರಿ ವೆಚ್ಚದ ದಾಖಲೆಗಳನ್ನು ಕಾರ್ಯದರ್ಶಿಗಳು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಮುಂದೆ ಹಾಜರುಪಡಿಸಿದಾಗ ಕಲಂ:357(ಎ) ದಂಡ ಪ್ರಕ್ರಿಯಾ ಸಂಹಿತೆ ಪ್ರಕಾರ **ವಿಚಾರಣೆ ಮಾಡಿ ಸೂಕ್ತ** ಪರಿಹಾರವನ್ನು ಪಡೆಯಲು ಸೂಚಿಸಲಾಗಿದೆ.

ಸರಕಾರದ ಪರವಾಗಿ **ಶ್ರೀ ಎಸ್. ಆರ್ ನರಸಿಂಹಲು, 1ನೇ ಅಪರ ಸರಕಾರಿ ಅಭಿಯೋಜಕರು**, ಕಲಬುರಗಿ, ಇವರು ಪ್ರಕರಣದ ವಿಚಾರಣೆ ನಡೆಸಿ ವಾದವನ್ನು ಮಂಡಿಸಿರುತ್ತಾರೆ.

SRNarsimhulu

(ಎಸ್. ಆರ್ ನರಸಿಂಹಲು)
1ನೇ ಅಪರ ಸರಕಾರಿ ಅಭಿಯೋಜಕರು
ಕಲಬುರಗಿ ಮೊಬೈಲ್:9448505976

ಇವರಿಗೆ,
ಮಾನ್ಯ ಉಪ ನಿರ್ದೇಶಕರು.
ವಾರ್ತಾ ಮತ್ತು ಪ್ರಚಾರ ಇಲಾಖೆ ಕಲಬುರಗಿ. ಇವರಿಗೆ ಮಾಹಿತಿಗಾಗಿ ಸದರಿ ಪತ್ರಿಕಾ ಪ್ರಕಟಣೆಯನ್ನು ಎಲ್ಲಾ ಪ್ರಮುಖ ಕನ್ನಡ ಮತ್ತು ಇಂಗ್ಲಿಷ ದಿನಪತ್ರಿಕೆಯಲ್ಲಿ ಮುದ್ರಿಸಲು, ಕ್ರಮ ಕೈಗೊಳಲು ವಿನಂತಿ.

Scanned with CamScanner